26.	ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿ.	0.16 ಳ ”
ನಷ್ಟ ಅನುಭವಿಸುತ್ತಿರುವ ಉದ್ಯಮಗಳ ಒಟ್ಟು ಮೊತ್ತ		4945.99

ಸ್ವಾತಂತ್ಯ ಯೋಧರ ಸಂಖ್ಯೆ

250 (319) ಶ್ರೀ ಜಿ. ರಾಜುಗೌಡ, (ಹನೂರು):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ರಾಜ್ಯದಲ್ಲಿ ಎಷ್ಟು ಜನ ಸ್ವಾತಂತ್ಯ ಯೋಧರಿದ್ದಾರೆ;

2. ಅವರಿಗಾಗಿ ಸರ್ಕಾರವು ಒಂದು ತಿಂಗಳಿಗೆ ಎಷ್ಟು ವೆಚ್ಚ ಮಾಡುತ್ತಿರುವುದು;

3. ಮೊತ್ತ ಪ್ರತಿ ತಿಂಗಳು ಕೊಡುವ ಬದಲು ಒಂದೇ ಸಾರಿ ನಿರ್ದಿಷ್ಟ ಮೊತ್ತವನ್ನು ಕೊಟ್ಟು ಆ ಹಣದಿಂದ ಬೇರೆ ಜೀವನೋಪಾಯ ಮಾಡಿಕೊಡುವುದು ಸೂಕ್ತವಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

1. 17,918

2. ರೂ. 1,14,33,147-00

3. ಈ ರೀತಿಯ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಮಲ್ಪೆ ಬೀಚ್‌ನಲ್ಲಿ ಹೋಟೆಲ್

218 (816) ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):-

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಮಲ್ಪೆ ಬೀಚ್‌ನಲ್ಲಿ ಹೋಟೆಲ್ ಕಟ್ಟುವ ಕಾರ್ಯವನ್ನು ಕೈಗೊಂಡಿರುವರೆ;

ಆ) ಹಾಗಿದ್ದಲ್ಲಿ, ನಿರ್ಮಾಣ ಕಾರ್ಯವನ್ನು ಯಾವಾಗ ಕೈಗೊಳ್ಳಲಾಯಿತು;

ಇ) ನಿರ್ಮಾಣ ಕಾರ್ಯದ ಪ್ರಾರಂಭಿಕದಲ್ಲಿನ ಅಂದಾಜು ವೆಚ್ಚ;

ಈ) ಖರ್ಚು ಮಾಡಲಾಗಿರುವ ಮೊಬಲಗು;

ಉ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಕಟ್ಟಡವು ಪೂರ್ಣಗೊಂಡಿದೆಯೇ;

ಊ) ಇಲ್ಲದಿದ್ದಲ್ಲಿ ಕಾರಣಗಳೇನು;

ಋ) ಗುತ್ತಿಗೆದಾರರಿಗೆ ಇದುವರೆಗೂ ಪಾವತಿಸಲಾದ ಹಣವೆಷ್ಟು;